ವಾಗುತ್ತದೆ ಎಷ್ಟೋ ಸೆಲ ಕಂಡಕ್ಟರ್‌ಗಳನ್ನು ಪ್ರಯಾಣಿಕರು ಹೊಡೆದಿದ್ದಾರೆ, ಬಡಿದಿದ್ದಾರೆ, ಇದರ ಜೊತೆಗೆ ಜನರು ಒಂದು ಕಡೆ ಸೇರಿದರೆ ಇಲ್ಲದ ಚಟಗಳನ್ನು ಕಲಿಯುವುದಕ್ಕೆ ಸಾಧ್ಯವಾಗುತ್ತದೆ. ಇದನ್ನೆಲ್ಲಾ ತಪ್ಪಿಸಲು ಕಾಲಕ್ಕೆ ಸರಿಯಾಗಿ ಬಸ್‌ಗಳು ಓಡಾಡುವಂತೆ ಏರ್ಪಾಡು ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ಅಂತಹ ದೂರುಗಳು ಬಂದಿಲ್ಲವೆಂದು ಉತ್ತರದಲ್ಲಿ ಹೇಳಲಾಗಿದೆ. ಮಾನ್ಯ ಸದಸ್ಯರು ಈಗ ನನ್ನ ಗಮನಕ್ಕೆ ತರುತ್ತಿದ್ದಾರೆ. ಅಂತಹದ್ದು ಏನಾದರು ಇದ್ದರೆ, ಅದನ್ನು ಸರ್ಕಾರದ ಗಮನಕ್ಕೆ ತಂದರೆ, ನಾನು ಅದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ಕೈಕೊಳ್ಳುತ್ತೇನೆ.

Formation of Nehru Loka in Mysore City.

380. SRI GANGADHARAN (Krishnaraj).—Will the Minister for Transport and Tourism be pleased ty state :—

(*a*) whether there was a scheme before Government for forming Nehru Land at Mysore City;

(*b*) if so, what was the planned scheme and its estimated expenditure;

(*c*) whether any amount has been spent, and if so, the sources out of which the funds were allotted for the same;

(*d*) The stage at which the scheme stands at present ?

SRI R. GUNDU RAO (Minister for Transport and Tonrism).—

(*a*) Yes.

(*b*) The planned scheme was :

(i) Improvement of the Zoo Gardens–a scheme for the expansion and development of this Zoo was proposed at a cost of Rs. 30 lakhs. This would include the Kensington Park, the Zoo, the Karanji Tank, etc.

(ii) Establishment of a Dolls' Museum.

(iiil Special display of the historical and cultural traditions of India.

(iv) Visual presentation of episodes from history and mythology.

(v) Laying a miniature Railway to Chamundi Hills. Over a period of 15–20 years. Expenditure has not been worked out.

(*c*) No.

(*d*) Scheme has been kept by as founds are not available.

ಶ್ರೀ ಎಚ್. ಗಂಗಾಧರನ್—ಮೈಸೂರಿನಲ್ಲಿ ನೆಹರೂ ಲೋಕವನ್ನು ರೂಪಿಸುವ ಬಗ್ಗೆ ಇಲ್ಲಿ ಕೆಲವು ವಿವರಗಳನ್ನು ಕೊಡಲಾಗಿದೆ. ಅದರಲ್ಲಿ ಚಾಮುಂಡಿ ಬೆಟ್ಟಕ್ಕೆ ಸಣ್ಣ ರೈಲು ಮಾರ್ಗ ನಿರ್ಮಿಸುವುದು ಸಹ ಸೇರಿದೆ. ನೀವು ಬಸ್ ಬಿಡುವುದನ್ನು ಬಿಟ್ಟು ರೈಲು ಬಿಡುವುದಕ್ಕೆ ಪ್ರಾರಂಭ ಮಾಡಿದಾಗಲೇ ಈ ಯೋಜನೆ ನಿಂತುಹೋಯಿತೆಂದು ಕಾಣುತ್ತದೆ, ಈ ಯೋಜನೆಯನ್ನು ತಾವು ಯಾವ ಆಧಾರದ ಮೇಲೆ ತಯಾರು ಮಾಡಿದ್ದೀರಿ ? ಇದನ್ನು ತಯಾರು ಮಾಡಿದವರು ಯಾರು ಮತ್ತು ಈ ಯೋಜನೆಯ ವೆಚ್ಚ ಎಷ್ಟು ?

† ಶ್ರೀ ಆರ್. ಗುಂಡೂರಾವ್ – ೧೯೬೬ನೇ ಇಸವಿಯಲ್ಲಿ ಈ ಮೈಸೂರು ನಗರವನ್ನು ಇಡೀ ಭಾರತದಲ್ಲಿಯೇ ಅತ್ಯಾಧುನಿಕವಾದಂಥ ಪ್ರವಾಸಿಗರ ಆಕರ್ಷಣೀಯವಾದಂಥ ಸ್ಥಳವನ್ನಾಗಿ ಮಾಡಬೇಕೆಂದು ಸರ್ಕಾರ ಒಂದು ತೀರ್ಮಾನ ಕೈಗೊಂಡಿತು. ಅನಂತರ ಈ ಬಗ್ಗೆ ಕೇಂದ್ರಸರ್ಕಾರದ ಜೊತೆಯಲ್ಲಿ ವ್ಯವಹಾರ ನಡೆಸಲಾಯಿತು. ಕಲೆಗಾರರಾದಂಥ ಶ್ರೀ ಸುಬ್ರಹ್ಮಣ್ಯರಾಜ ಅರಸ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನು ಒಳಗೊಂಡಂತೆ, ಈ ಮೈಸೂರು ನಗರವನ್ನು ಯಾವ ರೀತಿ ಸುಂದರವಾದಂಥ ಸ್ಥಳವನ್ನಾಗಿ ಮಾಡಬಹುದೆಂಬ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿಸಿ, ಅದನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡಲಾಯಿತು. ಇದು ಸುಮಾರು ೫ ಕೋಟಿ ರೂ.ಗಳ ಒಂದು ಯೋಜನೆ. ಆದರೆ ಇದು ಇಲ್ಲಿಯವರೆಗೂ ಕಾರ್ಯಗತವಾಗಿಲ್ಲ. ಏಕೆಂದರೆ, ಇದನ್ನು ಳಿನೇ ಯೋಜನೆಯಲ್ಲಿಯಾಗಲೀ ಅಥವಾ ೫ನೇ ಯೋಜನೆಯಲ್ಲಿಯಾಗಲಿ ಸೇರಿಸಲಿಲ್ಲ. ಈ ದೃಷ್ಟಿಯಿಂದ ಇದು ಇಲ್ಲಿಯವರೆಗೂ ಕಾರ್ಯಗತವಾಗಲಿಲ್ಲ.

ಶ್ರೀ ಎಚ್. ಗಂಗಾಧರನ್—ಇಲ್ಲಿ ೩೦ ಲಕ್ಷ ರೂ.ಗಳ ವೆಚ್ಚದಲ್ಲಿ ಪ್ರಯೋಗಾಲಯವನ್ನು ವಿಸ್ತರಿಸಿ ಹಾಗೂ ಅಭಿವೃದ್ಧಿಗೊಳಿಸುವ ಯೋಜನೆ ಇದೆ ಎಂದು ಹೇಳಿದ್ದೀರಿ. ಅದನ್ನು ಸಹ ಕೈಬಿಡಲಾಗಿದೆಯೋ ಅಥವಾ ಅದನ್ನು ಮುಂದುವರೆಸುತ್ತಿರೋ ? ಏಕೆಂದರೆ ಮಾನ್ಯ ಅರಣ್ಯ ಮಂತ್ರಿಗಳು ಈ ಹಣವನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ ;

ಶ್ರೀ ಆರ್. ಗುಂಡೂರಾವ್—ಮೈಸೂರು ನಗರವನ್ನು ಪ್ರವಾಸಿಗರಿಗೆ ಆಕರ್ಷಣೀಯವಾದಂಥ ನಗರವನ್ನಾಗಿ ಮಾಡುವುದಕ್ಕೆ ಯಾವ ರೀತಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸರ್ಕಾರ ಯೋಚನೆ ಮಾಡಿತ್ತೋ, ಅದನ್ನು ಕೈಬಿಟ್ಟಿಗತಕ್ಕದ್ದು ಅರಣ್ಯ ಇಲಾಖೆಯವರ ದೃಷ್ಟಿಯಿಂದ ಅಲ್ಲ.

ಶ್ರೀ ಎಚ್. ಗಂಗಾಧರನ್—ಈ ಮೊದಲು ಚಾಮುಂಡಿ ಬೆಟ್ಟದಲ್ಲಿ ತೆಪ್ಪೋತ್ಸವ ನಡೆಯುವಾಗ ಪ್ರವಾಸಿಗರು ಬೇಕಾದಷ್ಟು ಸಂಖ್ಯೆಯಲ್ಲಿ ಬರುತ್ತಿದ್ದರು. ನೂರಾರು ಬಸ್‌ಗಳು ಆ ಸಮಯದಲ್ಲಿ ಓಡಾಡುತ್ತಿದ್ದವು. ಈಗ ಅವೆಲ್ಲಾ ನಿಂತುಹೋಗಿದೆ. ಇದನ್ನು ಹಿಲ್-ಸ್ಟೇಷನ್ ಮಾಡಬೇಕು, ಟೂರಿಸ್ಟ್ ಸೆಂಟರ್ ಮಾಡಬೇಕೆಂದು ಹೇಳುತ್ತಿರುವಾಗ, ಅಲ್ಲಿ ಒಂದು ಛತ್ರವಿಲ್ಲ. ಬೇರೆ ರಾಜ್ಯಗಳಿಗೆ ಹೋಗಿ ಛತ್ರಗಳನ್ನು ಕಟ್ಟಿಸುತ್ತಿದ್ದೀರಿ. ಆದರೆ ಇಲ್ಲಿ ಮಾತ್ರ ಕಟ್ಟಿಸುತ್ತಿಲ್ಲ. ಇದನ್ನು ಒಂದು ಆಕರ್ಷಣೀಯವಾದಂಥ ಸ್ಥಳವನ್ನಾಗಿ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆರ್. ಗುಂಡೂರಾವ್—ಮೈಸೂರು ನಗರವನ್ನು ಒಂದು ದೊಡ್ಡ ಆಕರ್ಷಣೀಯವಾದಂಥ ನಗರವನ್ನಾಗಿ ಮಾಡಬೇಕೆಂಬುದೇ ಸರ್ಕಾರದ ಉದ್ದೇಶವಾಗಿದೆ. ಅದಕ್ಕೋಸ್ಕರ ಇಷ್ಟೆಲ್ಲಾ ಯೋಜನೆಗಳನ್ನು ಮಾಡಿರುವುದು ಕೇಂದ್ರದ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಎರಡು ಸಲ ಸಭೆಯನ್ನು ನಡೆಸಿ, ೧೯೭೩ನೇ ಇಸವಿಯಲ್ಲಿ ಈ ಬಗ್ಗೆ ಒಂದು ತೀರ್ಮಾನವನ್ನು ಸಹ ಕೈಗೊಳ್ಳಲಾಯಿತು. ಅದು ಹಣದ ಕೊರತೆಯಿಂದಾಗಿ ನಿಂತಿದೆ. ಚಾಮುಂಡಿಬೆಟ್ಟ, ಮೈಸೂರು ಅರಮನೆ, ಕೃಷ್ಣರಾಜಸಾಗರ ಮತ್ತು ಶ್ರೀರಂಗಪಟ್ಟಣ ಪ್ರದೇಶಗಳನ್ನು ಉತ್ತಮವಾದ ಪ್ರವಾಸಿ ಕೇಂದ್ರಗಳನ್ನಾಗಿ ಮಾಡಬೇಕೆಂದು ಸರ್ಕಾರಕ್ಕೆ ಬಹಳ ಆಸಕ್ತಿ ಇದೆ. ಹಣ ದೊರಕಿದ ಕೂಡಲೇ ಈ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಚ್. ಗಂಗಾಧರನ್—ನೆಹರೂ ಲೋಕ ಯೋಜನೆಗಾಗಿ ಚಾಮುಂಡಿಬೆಟ್ಟದ ಸುತ್ತಮುತ್ತಲ ಗ್ರಾಮದವರು ತಮ್ಮ ಜಮೀನುಗಳನ್ನು ಯಾರಿಗೂ ಮಾರಾಟ ಮಾಡಬಾರದೆಂದು ಆಜ್ಞೆ ಹೊರಡಿಸ ಲಾಗಿತ್ತು. ಆ ಯೋಜನೆಯನ್ನು ಈಗ ಕೈಬಿಟ್ಟಿರುವುದರಿಂದ ಆ ಗ್ರಾಮಗಳವರು ತಮ್ಮ ಜಮೀನನ್ನು ಮಾರುವುದಕ್ಕೆ ಅವಕಾಶವಿದೆಯಲ್ಲವೇ ?

ಶ್ರೀ ಆರ್. ಗುಂಡೂರಾವ್—ಆ ಮಾಹಿತಿ ಸದ್ಯ ನನ್ನ ಹತ್ತಿರವಿಲ್ಲ ವಿಚಾರ ಮಾಡಿ ತಿಳಿಸುತ್ತೇನೆ.

ಅಧ್ಯಕ್ಷರು—ಇಲ್ಲಿಗೆ ಪ್ರಶ್ನೋತ್ತರಗಳ ವೇಳೆ ಮುಗಿಯಿತು.

QUESTIONS FOR ANSWERS ON THE DAY

(but not taken up)

Growing Sandle Trees in Bidar District.

481 SRI BHIMANNA KHANDRE (Bhalki)—Will the Minister for Food and Forest be pleased to state:—

(*a*) the extent of acres of land that comes under Forest Department in the year 1957 *i.e.* after the State Re-Orgainisation took place (District wise information be furnished) ;

(*b*) the income and expenditure from the Forest in Bidar District since the last 3 years ;

(*c*) whether there is any plan and programme before the Government for the improvement of Forest in Bidar District ; if so, its details :

(*d*) whether it has come to the notice of Government that the soil of Bidar District is suitable to grow the Sandal Wood and if so, what action the Government has taken to grow sandal trees in forest areas of Bidar District ;

(*e*) the number of Sandal Trees grown at present in the Forest of Bidar District as on date ;

(*f*) whether hundreds of Sandal trees are cut unauthorisedly and are sold in Andhra Pradesh and, if so, the number of such cases detected and the action taken by the Government